# ಪರ್ಯಾಯ ಶೈಕ್ಷಣಿಕ ಯೋಜನೆ 2021–22

**ತರಗತಿ:5** **ಅಕ್ಟೋಬರ್ ಮಾಹೆ** **ಪ್ರಥಮ ಭಾಷೆ ಕನ್ನಡ**

| ವಾರ ಮತ್ತು ಪಾಠದ ಹೆಸರು | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಕೆಗಳು | ಮೌಲ್ಯಮಾಪನ |
|---|---|---|---|
| ಅಕ್ಟೋಬರ್ 1ನೇ ವಾರ | **<u>ಗದ್ಯಪಾಠ:</u>**<br>**04. ಸುಳ್ಳು ಹೇಳಬಾರದು**<br>• ನೈಜ ಘಟನೆಯೊಂದನ್ನು ಅರ್ಥವತ್ತಾಗಿ ವಿವರಿಸುವರು.<br>• ಧ್ವನಿಸುರುಳಿಯನ್ನು ಆಲಿಸಿ ಅರ್ಥೈಸಿಕೊಳ್ಳುವರು.<br>• ಪಾಠ ಭಾಗವನ್ನು ಧ್ವನಿ ಏರಿಳಿತದೊಂದಿಗೆ ಓದುವ ಸಾಮರ್ಥ್ಯ ಹೊಂದುವರು. | ಚಟುವಟಿಕೆ 1:<br>ಶಿಕ್ಷಕರು ವಿದ್ಯಾರ್ಥಿ/ನಿಯ ಜೀವನದಲ್ಲಿ ನಡೆದ ಒಂದು ಘಟನೆ, ಅದರಿಂದ ಆದ ಅನುಭವವನ್ನು ಅರ್ಥವತ್ತಾಗಿ ವಿವರಿಸಲು ಪ್ರೇರೇಪಿಸುವುದು<br><br>ಚಟುವಟಿಕೆ 2:<br>ಶಿಕ್ಷಕರು ತಮ್ಮ ಜೀವನದ ಒಂದು ಸಂದರ್ಭದಲ್ಲಿ ಸುಳ್ಳು ಹೇಳಿ ಪೇಚಿಗೆ ಸಿಲುಕಿಕೊಂಡ ಸನ್ನಿವೇಶ, ಅದಕ್ಕೆ ಕಾರಣ, ಅದರಿಂದಾದ ಪರಿಣಾಮ, ಕೈಗೊಂಡ ತೀರ್ಮಾನದ ಬಗ್ಗೆ ಧ್ವನಿಯೊಂದನ್ನು ಮುದ್ರಿಸಿ, ಮಕ್ಕಳು ಆಲಿಸಲು ಅನುಕೂಲಿಸುವುದು.<br>ವಿದ್ಯಾರ್ಥಿಯ ಭೇಟಿಯ ಸಮಯದಲ್ಲಿ ಶಿಕ್ಷಕರು "ಸುಳ್ಳು ಹೇಳಬಾರದು" ಪಾಠಭಾಗವನ್ನು ಧ್ವನಿ ಏರಿಳಿತದೊಂದಿಗೆ ಓದಿ ಮಕ್ಕಳಿಂದ ಓದಿಸಿ ಹೊಸಪದಗಳಿಗೆ ಅರ್ಥ ವಿವರಿಸುವುದು. | ಘಟನೆಯಿಂದ ತನ್ನಲ್ಲಾದ ಪರಿವರ್ತನೆ ಏಕೆ? ಹೇಗೆ? ಯಾವಾಗ? ಎಂದು ಶಿಕ್ಷಕರು ಪ್ರಶ್ನಿಸುವುದು.<br><br>ಶಿಕ್ಷಕರು ತಾವು ಮಾಡಿದ್ದು ಸರಿಯೇ? ತಪ್ಪೇ? ಹಾಗಾದರೆ ಏಕೆ? ಎಂದು ವಿದ್ಯಾರ್ಥಿಗಳೊಂದಿಗೆ ಚರ್ಚಿಸುವರು.<br><br>ಮೌಖಿಕ ಪ್ರಶ್ನೋತ್ತರ<br>ಅಭ್ಯಾಸ ಹಾಳೆಗಳು<br><br>ಚರ್ಚೆ |

| | | | |
|---|---|---|---|
| | • ಭಾಷಾ ಪ್ರಯೋಗವನ್ನು ಅರಿಯುವರು.<br><br>• ನಾಮಪದಗಳನ್ನು ಅರ್ಥೈಸಿಕೊಳ್ಳುವರು ಮತು ವರ್ಗೀಕರಿಸುವರು.<br><br>• ಆಲ್ಬಂ ತಯಾರಿಸುವ ಕೌಶಲವನ್ನು ಬೆಳೆಸಿಕೊಳ್ಳುವರು. | ಚಟುವಟಿಕೆ 3:<br>ಪಾಠಭಾಗವನ್ನು ಕಿರುನಾಟಕ ರೂಪದಲ್ಲಿ ಬರೆಯಲು ಮಾರ್ಗದರ್ಶನ ನೀಡುವುದು.<br><br>ಚಟುವಟಿಕೆ 4:<br>ನಾಮಪದದ ಅರ್ಥ, ವಿಧಗಳನ್ನು ವಿವಿಧ ಮಿಂಚು ಪಟ್ಟಿ, ಚಾರ್ಟ್‌ಗಳು, ನೈಜ ಸನ್ನಿವೇಶಗಳನ್ನು ಬಳಸಿಕೊಂಡು ಮನದಟ್ಟು ಮಾಡಿಸುವುದು.<br><br>ಚಟುವಟಿಕೆ 5:<br>ಕೊಟ್ಟಿರುವ ಪದಗಳನ್ನು ರೂಢನಾಮ, ಅಂಕಿತನಾಮ ಮತ್ತು ಅನ್ವರ್ಥನಾಮಗಳಾಗಿ ವಿಂಗಡಿಸಿ ಬರೆಯುವ ಚಟುವಟಿಕೆ ನೀಡುವುದು.<br><br>ಚಟುವಟಿಕೆ 6:<br>ಕರಪತ್ರ, ಲಗ್ನ ಪತ್ರಿಕೆಗಳು ಹಾಗೂ ಸಾಹಿತಿಗಳ ಕೈಬರಹಗಳನ್ನು ಸಂಗ್ರಹಿಸಿ, ಅಲ್ಬಂ ತಯಾರಿಸುವ ಯೋಜನೆ ನೀಡುವುದು. | ಸಿರಿ ಕನ್ನಡ 5 – ಪುಟ ಸಂಖ್ಯೆ 29–30<br><br>ಅಭ್ಯಾಸ ಹಾಳೆಗಳು<br><br>ಆಲ್ಬಂಗಳ ವೀಕ್ಷಣೆ ಮತ್ತು ಪ್ರದರ್ಶನ |
| ಅಕ್ಟೋಬರ್ 2ನೇ ವಾರ | **<u>ಪದ್ಯಪಾಠ:</u>**<br>**03 ವಚನಗಳು**<br>• ಧ್ವನಿ ಸುರುಳಿಯನ್ನು ಆಲಿಸಿ ಅರ್ಥ ಮಾಡಿಕೊಳ್ಳುವರು | ಚಟುವಟಿಕೆ 01:<br>ಶಿಕ್ಷಕರು ಲಯಬದ್ಧವಾಗಿ ಹಾಡಿದ ವಚನಗಳು, ಪದ್ಯದ ಧ್ವನಿಸುರುಳಿಯನ್ನು ವಿದ್ಯಾರ್ಥಿಗಳು ಆಲಿಸುವಂತೆ ಅನುಕೂಲಿಸುವುದು, ಹೊಸ ಪದಗಳನ್ನು ಪಟ್ಟಿ ಮಾಡಲು ಸೂಚಿಸುವುದು. | ಮಕ್ಕಳು ಆಲಿಸಿ, ಅರ್ಥಮಾಡಿಕೊಂಡ ಪದ್ಯದ ಕುರಿತು ಸರಳ ಮೌಖಿಕ ಪ್ರಶ್ನೆಗಳನ್ನು ಕೇಳುವುದು. |

| | | | |
|---|---|---|---|
| | • ಪದ್ಯದ ಭಾವಾರ್ಥವನ್ನು ಅರಿಯುವರು.<br><br>• ವಚನಕಾರರ ಕಿರುಪರಿಚಯ ಹೊಂದುವರು. | ಚಟುವಟಿಕೆ 02:<br>ಭೇಟಿ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಾವು ಆಲಿಸಿದ ವಚನಗಳ ಸಾರಾಂಶ, ಪಟ್ಟಿ ಮಾಡಿದ ಹೊಸ ಪದಗಳ ಅರ್ಥವನ್ನು ವಿವರಿಸುವುದು.<br><br>ಚಟುವಟಿಕೆ 03:<br>ಶಿಕ್ಷಕರು ಬಸವಣ್ಣ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ ಮತ್ತು ಆಯ್ದಕ್ಕಿ ಲಕ್ಕಮ್ಮರ ಕಾಲ, ಸ್ಥಳ, ಅಂಕಿತನಾಮ, ಸಾಹಿತ್ಯ ವಿಶೇಷತೆ ಬರೆಯಲು ವಿದ್ಯಾರ್ಥಿಗಳಿಗೆ ಕಾಲಂ ರಚಿಸಿಕೊಟ್ಟು ಅನುಕೂಲಿಸುವುದು. | ಪ್ರಶ್ನೋತ್ತರದ ಅಭ್ಯಾಸ ಹಾಳೆಗಳ ಬಳಕೆ<br><br>ಪ್ರದರ್ಶನ ಮತ್ತು ವೀಕ್ಷಣೆ |
| ಅಕ್ಟೋಬರ್ 3ನೇ ವಾರ | • ಗುಣವಿಶೇಷಣಗಳನ್ನು ಅರ್ಥೈಸುವರು.<br><br>• ಗುಣವಿಶೇಷ ಪದಗಳನ್ನು ವರ್ಗೀಕರಿಸುವರು. | ಚಟುವಟಿಕೆ 04:<br>ನಾಮಪದದ ವಿಶೇಷ ಗುಣವನ್ನು ಸೂಚಿಸುವ ಪದವೇ ಗುಣವಿಶೇಷಣ ಎಂಬುದನ್ನು ಹಲವಾರು ವಾಕ್ಯಗಳ ಉದಾಹರಣೆ ಕೊಡುತ್ತಾ ಅರ್ಥೈಸುವುದು.<br><br>ಚಟುವಟಿಕೆ 05:<br>ಗುಣ ವಿಶೇಷ ಪದಗಳನ್ನೊಳಗೊಂಡ ಪ್ಯಾರವೊಂದನ್ನು ರಚಿಸಿ ಗುಣವಿಶೇಷಣ ಪದಗಳನ್ನು ಆಯ್ದು ಬರೆಯಲು ತಿಳಿಸುವುದು. | ಸಿರಿಕನ್ನಡ 5 – ಪುಟ ಸಂಖ್ಯೆ 81<br><br>ಅಭ್ಯಾಸ ಹಾಳೆಗಳು |

# ಅಭ್ಯಾಸ ಹಾಳೆ 01

**ಅ) ಬಿಟ್ಟ ಸ್ಥಳವನ್ನು ಸೂಕ್ತ ಉತ್ತರದಿಂದ ಭರ್ತಿಮಾಡಿರಿ.**

1. ಇಬ್ಬರು ಮಕ್ಕಳೂ ಸುಳ್ಳು ಹೇಳಿದ್ದರಿಂದ ಅಮ್ಮನ ____________ ಭಯವಾಯಿತು.
2. ಎಷ್ಟೇ ಕಷ್ಟ ಬಂದರೂ ________________.
3. ಮಗುವಾಗಿದ್ದಾಗ ಗಾಂಧೀಜಿಯವರನ್ನು ಎಲ್ಲರೂ __________________ ಎಂದು ಕರೆಯುತ್ತಿದ್ದರು.
4. ಸೂರ್ಯ ಕಾಣಬೇಕಾದರೆ ____________________ ಕರಗಬೇಕು.

(ಕಪ್ಪು ಮೋಡಗಳು, ಕೈಮುಟ್ಟಲು, ಸುಳ್ಳು ಹೇಳಬಾರದು, ಮೋನು ಪಾಪು)

**ಆ) ಹೊಂದಿಸಿ ಬರೆಯಿರಿ.**

| ಅ ಪಟ್ಟಿ | | ಬ ಪಟ್ಟಿ | ಉತ್ತರಗಳು |
|---|---|---|---|
| 1. ಉದಯಿಸು | – | ಆವರಿಸು | ________________ |
| 2. ಕವಿ | – | ಹುಟ್ಟು | ________________ |
| 3. ಮುಂಜಾನೆ | – | ಮುಂದೆ ಒಡ್ಡು | ________________ |
| 4. ಚಾಚು | – | ನಸುಕು | ________________ |

**ಇ) ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಪುತಲೀಬಾಯಿ ಪ್ರತೀ ವರ್ಷ ಯಾವ ಮಾಸದಲ್ಲಿ ಉಪವಾಸವಿರುತ್ತಿದ್ದರು?

ಉತ್ತರ: ____________________________________________________________

2. ವ್ರತದ ನಿಯಮ ಏನು?

ಉತ್ತರ: ____________________________________________________________

3. ಸೂರ್ಯ ಯಾವ ದಿಕ್ಕಿನಲ್ಲಿ ಉದಯಿಸುತ್ತಾನೆ?

ಉತ್ತರ: ____________________________________________________________

4. ಅಮ್ಮನಿಗೆ ಮಕ್ಕಳಿಬ್ಬರು ಏನು ಹೇಳುತ್ತಿದ್ದಾರೆ ಎಂದು ಗೊತ್ತಾಗುತ್ತಿತ್ತು?

ಉತ್ತರ: ____________________________________________________________

**ಈ) ಕೊಟ್ಟಿರುವ ಪದಗಳನ್ನು ರೂಢನಾಮ, ಅಂಕಿತನಾಮ ಮತ್ತು ಅನ್ವರ್ಥನಾಮಗಳಾಗಿ ವಿಂಗಡಿಸಿ ಬರೆಯಿರಿ.**

| | | | | | | | |
|---|---|---|---|---|---|---|---|
| ಮೋನು | ಲಲಿತ | ತಾಯಿ | ಗಾಂಧೀಜಿ | ಪ್ರವೀಣ | ಶಾಲೆ | ಹಸೀನಾ | ಶಿಕ್ಷಕ |
| ನ್ಯಾಯಾಧೀಶ | ಆನೆ | ವ್ಯಾಪಾರಿ | ಮಗು | ಪುಸ್ತಕ | ನೇಕಾರ | ಕಾವಲುಗಾರ | ಕುರುಡ |

| ರೂಢನಾಮ | ಅಂಕಿತನಾಮ | ಅನ್ವರ್ಥನಾಮ |
|---|---|---|
| | | |

**ಉ) ಕೊಟ್ಟಿರುವ ಪ್ಯಾರಾದಲ್ಲಿರುವ ನಾಮಪದಗಳನ್ನು ರೂಢನಾಮ, ಅಂಕಿತನಾಮ ಮತ್ತು ಅನ್ವರ್ಥನಾಮಗಳಾಗಿ ವಿಂಗಡಿಸಿ ಬರೆಯಿರಿ.**

ಐದನೇ ತರಗತಿಯ ಮಕ್ಕಳೆಲ್ಲರೂ ಮೈಸೂರಿನ ಸುತ್ತಲಿನ ಸ್ಥಳಗಳಾದ ಮೈಸೂರು ಅರಮನೆ, ಶ್ರೀರಂಗ ಪಟ್ಟಣ, ಚಾಮುಂಡಿ ಬೆಟ್ಟ, ರಂಗನತಿಟ್ಟು, ಮೃಗಾಲಯಕ್ಕೆ ಪ್ರವಾಸ ಹೊರಟರು. ದಾರಿಯಲ್ಲಿ ಬೆಟ್ಟ, ನದಿ, ಮರಗಳು, ವಿವಿಧ ಪ್ರಾಣಿಗಳು, ಪಕ್ಷಿಗಳನ್ನು ಕಂಡರು. ಹೆಂಗಸೊಬ್ಬಳು ರಂಗುರಂಗಿನ ಆಟಿಕೆ ಮಾರುವುದನ್ನು, ವ್ಯಾಪಾರಿಯೊಬ್ಬ ಜೋರಾಗಿ ಕೂಗುತ್ತಾ ಗ್ರಾಹಕರನ್ನು ಸೆಳೆಯುವುದನ್ನು ಗಮನಿಸಿದರು. ಶಾಲೆಯ ಶಿಕ್ಷಕರು, ಎಸ್.ಡಿ.ಎಂ.ಸಿ ಅಧ್ಯಕ್ಷರು, ಬಸ್ ಚಾಲಕ ಹೆಜ್ಜೆ ಹೆಜ್ಜೆಗೂ ಗುಂಪು ಬಿಟ್ಟು ಅತ್ತಿತ್ತ ಹೋಗದಂತೆ ನೀಡುತ್ತಿದ್ದ ಎಚ್ಚರಿಕೆಯನ್ನು ಮಕ್ಕಳು ಪಾಲಿಸುತ್ತಾ ಸಾಗಿದರು. ಚಾಮುಂಡಿ ತಾಯಿಗೆ ಕೈಮುಗಿದು ಪೂಜಾರಿ ಕೊಟ್ಟ ಮಂಗಳಾರತಿ ಪಡೆದು, ರಾತ್ರಿ ಒಂಭತ್ತು ಗಂಟೆಗೆ ತಮ್ಮ ಊರಿಗೆ ಹಿಂದಿರುಗಿದರು.

| **ರೂಢನಾಮ** | **ಅಂಕಿತನಾಮ** | **ಅನ್ವರ್ಥನಾಮ** |
|---|---|---|
| | | |

# <u>ಅಭ್ಯಾಸ ಹಾಳೆ 02</u>

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಬಡತನಕ್ಕೆ ಯಾವ ಚಿಂತೆ?

ಉತ್ತರ: ____________________________________________

2. ಯಾರನ್ನು ಹಳಿಯಬಾರದು?

ಉತ್ತರ: ____________________________________________

3. ಲೋಕದಲ್ಲಿ ಸ್ತುತಿ, ನಿಂದೆಗಳು ಬಂದರೆ ಹೇಗಿರಬೇಕು?

ಉತ್ತರ: ____________________________________________

4. ಮುಡಿಯಿಲ್ಲದ ಶೃಂಗಾರ ಯಾವುದು?

ಉತ್ತರ: ____________________________________________

**ಆ) ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ.**

1. ಕಳಬೇಡ ____________________

____________________________

____________________________

____________________________

__________ ಸಂಗಮ ದೇವನೊಲಿಸುವ ಪರಿ

2. ಗರ್ವದಿಂದ ____________________

____________________________

____________________________

____________________________

____________________________

____________________ ಮುಟ್ಟದ ಭಕ್ತಿ

**ಇ) ವಚನಕಾರರ ಕಾಲ, ಸ್ಥಳ ಕುರಿತಾದ ಮಾಹಿತಿಯನ್ನು ಪೂರ್ಣವಾಗಿ ಬರೆಯಿರಿ.**

**1. ಬಸವಣ್ಣ :–**

ಕಾಲ: ______________

ಸ್ಥಳ: ______________________________

ಅಂಕಿತನಾಮ: _________________________

ವಿಶೇಷತೆ: ____________________________________________

**2. ಅಂಬಿಗರ ಚೌಡಯ್ಯ:–**

ಕಾಲ: ________________

ಸ್ಥಳ: ________________________________

ಅಂಕಿತನಾಮ: __________________________

ವಿಶೇಷತೆ: ____________________________________________________________

**3. ಅಕ್ಕಮಹಾದೇವಿ:–**

ಕಾಲ: ________________

ಸ್ಥಳ: ________________________________

ಅಂಕಿತನಾಮ: __________________________

ವಿಶೇಷತೆ: ____________________________________________________________

**4. ಆಯ್ದಕ್ಕಿ ಲಕ್ಕಮ್ಮ:–**

ಕಾಲ: ________________

ಸ್ಥಳ: ________________________________

ಅಂಕಿತನಾಮ: __________________________

ವಿಶೇಷತೆ: ____________________________________________________________

**ಈ) ಕೊಟ್ಟಿರುವ ಪ್ಯಾರಾದಲ್ಲಿರುವ ಗುಣವಿಶೇಷಗಳನ್ನು ಗುರುತಿಸಿ, ಅಡಿಗೆರೆ ಹಾಕಿ, ಆರಿಸಿ ಬರೆಯಿರಿ.**

ಭಾನು ಐದನೇ ತರಗತಿಯಲ್ಲಿ ಓದುತ್ತಿರುವ ಜಾಣ ಹುಡುಗಿ. ತನ್ನ ತಂದೆ ತಾಯಿಯೊಡನೆ ಅಜ್ಜಿಯ ಊರಿಗೆ ಹೋಗುವಾಗ ದಾರಿಯಲ್ಲಿ ಸುಂದರ ಹೂದೋಟ, ದೊಡ್ಡ ಕೆರೆ, ನೀಲಿ ಆಗಸ, ಕಪ್ಪು ಮೋಡ, ಬಿಳಿಯ ಮೊಲ, ಹಸಿರು ಹೊಲಗಳನ್ನು ನೋಡುತ್ತಾ, ತಂಪಾದ ಗಾಳಿ, ಕೋಗಿಲೆಯ ಮಧುರ ಗಾನ ಆಲಿಸುತ್ತಾ ಸಾಗಿದಳು. ಎತ್ತರವಾದ ವ್ಯಕ್ತಿಯ ಪಕ್ಕ ನಿಂತ ಪುಟ್ಟ ಹುಡುಗಿಯನ್ನು ಕಂಡು ನಕ್ಕಳು. ಉದ್ದನೆಯ ಹಾವೊಂದು ಚಿಕ್ಕ ಕಪ್ಪೆಯನ್ನು ನುಂಗುತ್ತಿರುವುದನ್ನು ಕಂಡು ಅಚ್ಚರಿಗೊಂಡಳು. ಅಜ್ಜಿಯ ಮನೆ ತಲುಪಿ ಸಿಹಿ ಹಣ್ಣು ತಿಂದು, ಬಿಸಿ ಹಾಲು ಕುಡಿದು, ಮೆತ್ತನೆಯ ಹಾಸಿಗೆಯಲ್ಲಿ ಮಲಗಿ, ದಾರಿಯಲ್ಲಿ ಕಂಡದ್ದನ್ನೆಲ್ಲಾ ನೆನೆಯುತ್ತಾ ನಿದ್ದೆಗೆ ಜಾರಿದಳು.

ಗುಣವಿಶೇಷಗಳು:–

| | | | |
|---|---|---|---|
| | | | |
| | | | |
| | | | |
| | | | |